CW : 15
PW : 9

# ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ

## CC No.475/2023

| | | |
|---|---|---|
| ಸಾಕ್ಷಿದಾರರ ಹೆಸರು | : | ಕುಶಾಲಪ್ಪ ಗೌಡ |
| ತಂದೆಯ ಹೆಸರು | : | ದಿ. ಪೂವಯ್ಯ ಗೌಡ |
| ಪ್ರಾಯ | : | 62 |
| ಉದ್ಯೋಗ | : | ನಿವೃತ್ತ ASI |
| ವಾಸಸ್ಥಳ | : | ಕೊಲ್ಲು, ಕಡಬ |
| ದಿನಾಂಕಃ 04.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು. | | |
| | | |

ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದಃ

ನಾನು 2019 ರಿಂದ ನವೆಂಬರ್ 2023 ವರೆಗೆ ಪುತ್ತೂರು ಸಂಚಾರಿ ಠಾಣೆಯಲ್ಲಿ ASI ಆಗಿ ಕರ್ತವ್ಯ ನಿರ್ವಹಿಸಿದ್ದೆನು.

ದಿಃ15.05.2023 ರಂದು ಚಾಸಾ14 ರವರು ಗಾಯಾಳುವಿನ ಹೇಳಿಕೆಯನ್ನು ಪಡೆದುಕೊಂಡು ಬಂದಿದ್ದನ್ನು ಸ್ವೀಕರಿಸಿ, ಅ. ಕ್ರ.68/2023 ರಂತೆ ಪ್ರಕರಣ ದಾಖಲಿಸಿ ಪ್ರ. ವರ್ತಮಾನ ವರದಿಯನ್ನು ನಾಯಾಲಯಕ್ಕೆ ಮತ್ತು ಪ್ರತಿಯನ್ನು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ.

ದಿಃ16.05.2023 ರಂದು ಘಟನಾ ಸ್ಥಳಕ್ಕೆ ಭೇಟಿ ನೀಡಿ, ಚಾಸಾ7 ಮತ್ತು 8 ರವರ ಸಮಕ್ಷಮ, ಚಾಸಾ-6 ರವರು ಸ್ಥಳ ತೋರಿಸಿದಂತೆ, ಮಹಜರು ಮತ್ತು ಕರಡು ನಕಾಶೆಯನ್ನು ತಯಾರಿಸಿ, 2

CW : 15
PW : 9

ವಾಹನವನ್ನು ಸ್ವಾಧೀನಪಡಿಸಿಕೊಂಡಿರುತ್ತೇನೆ. ಸದರಿ ಮಹಜರು, ಕರಡು ನಕಾಶೆಯನ್ನು ಈಗಾಗಲೇ ನಿಪಿ-4 ಮತ್ತು 5 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-4(ಡಿ), 5(ಡಿ)** ಎಂದು ಗುರುತಿಸಲಾಯಿತು.

ಅದೇ ದಿನ ಚಾಸಾ-2 ರಿಂದ 5 ರವರ ಹೇಳಿಕೆ ಪಡೆದಿರುತ್ತೇನೆ. ಚಾಸಾ4 ರವರು ನಿಪಿ6 ರಂತೆ, ಚಾಸಾ5 ರವರು ನಿಪಿ15 ರಂತೆ ಹೇಳಿಕೆ ನೀಡಿರುತ್ತಾರೆ. ಠಾಣೆಗೆ ಬಂದು ವಾಹನಗಳ ಮಾಲಿಕರಿಗೆ ಕಲಂ 133 ರಡಿ ನೋಟೀಸು ನೀಡಿ, ಉತ್ತರ ಪಡೆದು, ನಷ್ಟಭರ್ತಿ ಮುಚ್ಚಳಿಕೆಯನ್ನು ಪಡೆದು ವಾಹನಗಳನ್ನು ಬಿಡುಗಡೆ ಮಾಡಿರುತ್ತೇನೆ. ನೋಟೀಸು , ಉತ್ತರ , ನಷ್ಟಭರ್ತಿ ಮುಚ್ಚಳಿಕೆಯನ್ನು ಈಗಾಗಲೇ ನಿಪಿ-11 ರಿಂದ 13 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-11(ಎ) ಯಿಂದ 13(ಎ)** ಎಂದು ಗುರುತಿಸಲಾಯಿತು. ಗಾಯದ ಪ್ರಮಾಣಪತ್ರ, IMV ವರದಿಯನ್ನು ಪಡೆದು ಕಲಂ 279, 338 ರಡಿಯಲ್ಲಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಗಾಯದ ಪ್ರಮಾಣಪತ್ರ, IMV ವರದಿಯನ್ನು ಈಗಾಗಲೇ ನಿಪಿ-10 ಮತ್ತು 14 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-10(ಎ) ಮತ್ತು 14(ಎ)** ಎಂದು ಗುರುತಿಸಲಾಯಿತು. ಆರೋಪಿಯು ನ್ಯಾಯಾಲಯದ ಮುಂದೆ ಹಾಜರಿರುತ್ತಾರೆ. ನಿಪಿ1 ಮತ್ತು 2 ರಲ್ಲಿ ವಾಹನಗಳನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀಸವಾಲು ಆರೋಪಿ ಪರ ಶ್ರೀ **M.M.** ವಕೀಲರಿಂದಃ

ದಿಃ 14.05.2023 ರಂದು ಠಾಣೆಯಲ್ಲಿ ಯಾರು SHO ಆಗಿದ್ದರು ಎಂದು ನನಗೆ ಈಗ ನನಗೆ ನೆನಪಿಲ್ಲ. ದಿಃ15.05.2023 ರಂದು ನಾನು SHO ಆಗಿದ್ದಾಗ ಚಾಸಾ1 ರವರ ಸೂಚನಾ ಪತ್ರ ಮಾತ್ರ ಬಂದಿರುತ್ತದೆ. ಮೃತ ಚೆನ್ನಪ್ಪ ಧ್ರಾವಿಡ ರವರ ಸೂಚನಾ ಪತ್ರ ಬಂದಿರುವುದಿಲ್ಲ. ಚಾಸಾ1 ರವರ ಸೂಚನಾ ಪತ್ರವನ್ನು ನ್ಯಾಯಾಲಯಕ್ಕೆ ದೋ. ಪ. ಯೊಂದಿಗೆ ಸಲ್ಲಿಸಿರುವ ಬಗ್ಗೆ ನೆನಪಿಲ್ಲ. ನನಗೆ ಸೂಚನಾ ಪತ್ರ ಬೆಳಿಗ್ಗೆ 9.30 ಕ್ಕೆ ಬಂದಿರುತ್ತದೆ. ಘಟನಾ ಸ್ಥಳ ನಮ್ಮ ಠಾಣೆಯಿಂದ 1.5 ಕಿ.ಮೀ. ದೂರದಲ್ಲಿದೆ. 15 ನೇ

CW : 15
PW : 9

ತಾರೀಖಿನಂದು ಮಹಜರು ಮಾಡಲು ಸಾಕ್ಷಿದಾರರು ಸಿಕ್ಕಿರುವುದಿಲ್ಲ. ಮಹಜರು ಸಾಕ್ಷಿದಾರರನ್ನು ನಾನೇ ಘಟನಾ ಸ್ಥಳಕ್ಕೆ ಬರಮಾಡಿಕೊಂಡಿರುತ್ತೇನೆ. ಆ ಬಗ್ಗೆ ಅವರಿಗೆ ನೋಟೀಸು ಮಾಡಿರುವುದಿಲ್ಲ. ನಾನು ಘಟನಾ ಸ್ಥಳಕ್ಕೆ ಹೋದಾಗ ವಾಹನಗಳು ರಸ್ತೆಯ ಬದಿಯಲ್ಲಿದ್ದವು. ಹಾಗೆ ರಸ್ತೆಯ ಬದಿಯಲ್ಲಿದ್ದದ್ದರಿಂದ ನಿಖರವಾಗಿ ಅಪಘಾತವಾಯಿತು ಎಂದು ಹೇಳಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಕರಡು ನಕಾಶೆಯನ್ನು ಅಂದಾಜಿಗೆ ಬಿಡಿಸಿರುತ್ತೇನೆ ಎಂದರೆ ಸರಿಯಲ್ಲ. ರಸ್ತೆಯಲ್ಲಿ ಬ್ರೇಕ್ ಮಾರ್ಕ್ ಗಳು ಇತ್ತಾ ಎಂದರೆ ನನಗೆ ನೆನಪಿಗೆ ಬರುತ್ತಿಲ್ಲ. ಚಾಸಾ2 ರಿಂದ 5 ರವರ ಹೇಳಿಕೆಯನ್ನು ನಾನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಬರೆದಂತೆ ಅವರು ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತ ಚಾಸಾ1 ರವರ ತಪ್ಪಿನಿಂದಲೇ ಆಗಿದ್ದು, ಅವರು ಏಕಾಏಕಿಯಾಗಿ ಸ್ಕೂಟರ್ ನ್ನು ಯಾವುದೇ ಸೂಚನೆ ನೀಡದೇ ನಿಲ್ಲಿಸಿದ್ದರಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಸರಿಯಾಗಿ ತನಿಖೆ ಮಾಡದೇ ನಿರಪರಾಧಿಗಳ ಮೇಲೆ ಸುಳ್ಳು ಪ್ರಕರಣಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ದೋ. ಪ. ಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

ನನ್ನ ಉಕ್ತಲೇಖನದ ರೀತ್ಯಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ. ಇದೆ

ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಪುತ್ತೂರು